# ಶುಭಹಾರೈಕೆಗೆ ಇಂದಿರಾ ಪ್ರತ್ಯುತ್ತರ


Shri Manjunatha,
S/o Sh. M.S. Narayana Rao,
Sree Rameswara Temple,
Sree Rama Nagar,
Bhadra Colony, P.O.,
Bhadravathi, Tq.,
Mysore State.

प्रधान मंत्री भवन
PRIME MINISTER'S HOUSE
NEW DELHI


प्रधान मंत्री भवन
PRIME MINISTER'S HOUSE
NEW DELHI
March 1971

Thank you for your message of congratulations.

The confidence of our people has entrusted us with heavy responsibility. This can be shouldered only with their continued support.

Indira Gandhi

ಈಚೆಗೆ ನಾನು ಶಿವಮೊಗ್ಗದ ಭದ್ರಾವತಿಯಲ್ಲಿರುವ ನಮ್ಮ ಸೋದರ ಮಾವ ಮಂಜುನಾಥ್ ಅವರ ಮನೆಗೆ ಹೋಗಿದ್ದೆ. ಮಾವನೊಂದಿಗೆ ಮಾತುಕತೆಯಲ್ಲಿ ತೊಡಗಿದ್ದಾಗ ಇಂದಿರಾ ಗಾಂಧಿಯ ಪ್ರಸ್ತಾಪವು ಬಂತು. ಆಗ ಮಾವ ಮಂಜುನಾಥ್ ಅವರು ಒಂದು ವಿಶೇಷ ಪತ್ರ ಹಾಗೂ ಅದರ ಲಕೋಟೆಯನ್ನು ತೋರಿಸಿದರು. ಅದು ದೇಶದ ಮೊದಲ ಮಹಿಳಾ ಪ್ರಧಾನಿ ಇಂದಿರಾ ಗಾಂಧಿಯವರು ನಮ್ಮ ಮಾವನಿಗೆ ಬರೆದಿದ್ದ ಪತ್ರವಾಗಿತ್ತು. 1971–72ರಲ್ಲಿ ಇಂದಿರಾ ಗಾಂಧಿಯವರು ಲೋಕಸಭೆ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಗೆದ್ದು ಪ್ರಧಾನ ಮಂತ್ರಿಯಾದ ವೇಳೆಯಲ್ಲಿ ಅವರು ಬರೆದ ಕೈ ಬರಹದ ಪತ್ರವೆನ್ನುವುದು ಇನ್ನೂ ವಿಶೇಷ.

ಚುನಾವಣೆಯಲ್ಲಿ ಗೆದ್ದು ಪ್ರಧಾನಿಯಾದಾಗ ನಮ್ಮ ಮಾವ, ಅವರಿಗೆ ಶುಭಾಶಯ ಕೋರಿ ಕಾಗದ ಬರೆದಿದ್ದರಂತೆ. ಅದಕ್ಕೆ ಪ್ರತ್ಯುತ್ತರ ರೂಪದಲ್ಲಿ ಸ್ವತಃ ಇಂದಿರಾ ಗಾಂಧಿಯವರೇ ಈ ಪತ್ರವನ್ನು ಬರೆದಿದ್ದರೆಂದು ಮಾವ ನೆನಪು ಮಾಡಿಕೊಂಡರು. ಸಾಮಾನ್ಯ ವ್ಯಕ್ತಿಗೆ ಸಂದ ಪುರಸ್ಕಾರವಿದು. ರಾಜಕೀಯ ಟೀಕೆಗಳ ಹೊರತಾಗಿ ಇಂದಿರಾ ಗಾಂಧಿಯವರ ವ್ಯಕ್ತಿತ್ವಕ್ಕೆ ಇದು ಸ್ಪಷ್ಟ ಉದಾಹರಣೆ.

–ಭಾರತೀ ಗಂಗಾಧರ್, ಬೆಂಗಳೂರು





# ಕಣ್ಣು ತೆರೆ(ಸು)ವ ಬುದ್ಧ!

ಬುದ್ಧ ಎಂದ ಕೂಡಲೇ ಕಣ್ಣ ಮುಂದೆ ಗೋಚರವಾಗುವುದು ಶಾಂತೀಯತೆ. ಕಣ್ಣು ಮುಚ್ಚಿಕೊಂಡು ಧ್ಯಾನಸ್ಥ ಸ್ಥಿತಿಯಲ್ಲಿರುವ ಬುದ್ಧನ ಭಂಗಿಯೂ ಒಮ್ಮೆ ಕಣ್ಣೆದುರಿಗೆ ಸುಳಿಯುತ್ತದೆ. ಕಣ್ಣುಗಳನ್ನು ಮುಚ್ಚಿದ ಹಾಗೂ ಧ್ಯಾನಸ್ಥಿತಿಯಲ್ಲಿ ಇರುವಂತಹ ಬುದ್ಧ ಮೂರ್ತಿಗಳನ್ನಷ್ಟೇ ನಾನು ಇದುವರೆಗೆ ಕಂಡಿದ್ದು. ಆದರೆ, ಸಾಗರ–ಜೋಗ ಹೆದ್ದಾರಿ ಸಮೀಪ ಕಣ್ಣು ತೆರೆದಿರುವ ತಪೋನಿರತ ಬುದ್ಧ ಮೂರ್ತಿಯಿದೆ. ಈ ಮೂರ್ತಿಯ ಸೃಷ್ಟಿಕರ್ತ ಸಿರಿವಂತೆಯ ಎನ್. ಚಂದ್ರಶೇಖರ್.

ದೇಹ ದಾನ ಮತ್ತು ನೇತ್ರದಾನದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಅವರು ಕಂಡುಕೊಂಡ ಉಪಾಯವೇ 'ಕಣ್ಣು ತೆರೆವ ಬುದ್ಧ' ಮೂರ್ತಿಯ ಕಲ್ಪನೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಮೂರ್ತಿಯ ಕಣ್ಣುಗಳು ಮುಚ್ಚುವಂತೆ ಹಾಗೂ ತೆರೆದುಕೊಳ್ಳುವಂತೆ ಮಾಡಿದ್ದಾರೆ. ಬುದ್ಧ ಕಂಡುಕೊಂಡಂತೆ ಸತ್ಯ ಮಾರ್ಗಗಳನ್ನು ಜನರಿಗೆ ಅರ್ಥೈಸುವ ದೃಷ್ಟಿಯಿಂದ ಬುದ್ಧನ ವಿಗ್ರಹದ ಕಣ್ಣು ತೆರೆಸುವ ಮೂಲಕ, ಜನರ ಕಣ್ಣು ತೆರೆಸುವ ಈ ವಿನೂತನ ಪ್ರಯೋಗ ಮಾಡಿದ್ದಾರೆ. ಕಳೆದ ಎರಡು ವರ್ಷಗಳಿಂದ ತಮ್ಮ ಮನೆಯಂಗಳದಲ್ಲಿ ಈ ಬುದ್ಧನ ಸಾರ್ವಜನಿಕರ ದರ್ಶನಕ್ಕೆ ಇಟ್ಟಿದ್ದಾರೆ. ಇವರು ತಮ್ಮ ಮಡದಿಯ ಕಣ್ಣುಗಳನ್ನು ದಾನಮಾಡಿ ಇತರರಿಗೆ ಮಾದರಿಯಾಗಿದ್ದಾರೆ. ಇವರ ಈ ಕಾರ್ಯಕ್ಕೆ ಶಿವಮೊಗ್ಗದ ಶಂಕರ ಕಣ್ಣಿನ ಆಸ್ಪತ್ರೆಯೂ ಕೈಜೋಡಿಸಿದೆ. ಇವರ 'ಚಿತ್ರಸಿರಿ' ಅಂಗಡಿಯಲ್ಲಿ ಭತ್ತದ ತೆನೆ ತೋರಣಗಳು ಕಣ್ಮನ ಸೆಳೆಯುತ್ತವೆ.

–ವಾ. ಮುರಳೀಧರ, ತೀರ್ಥಹಳ್ಳಿ

# ಪಾಪ ಕಳೆವ ದಾರಿ!



ತೀರ್ಥಹಳ್ಳಿಯ ರಾಮಕೊಂಡಕ್ಕೆ ಹೋಗುವ ಕಾಲುದಾರಿಯ ಚಿತ್ರವಿದು. ಎಳ್ಳಮವಾಸ್ಯೆಯಂದು ವರ್ಷಕ್ಕೊಮ್ಮೆ ಜನರು ತಮ್ಮ ಪಾಪ ಕರ್ಮಗಳನ್ನು ತೊಡೆದುಕೊಳ್ಳಲು ಹರಿಯುವ ನೀರನ್ನು ದಾಟಿಕೊಂಡು ಅಥವಾ ನೀರಿನ ಮಟ್ಟ ಕಡಿಮೆ ಇದ್ದಾಗ ಬಂಡೆಗಳ ಮೇಲೆ ನಡೆದುಕೊಂಡು ಹೋಗುತ್ತಾರೆ.

ನೀರು ಸದಾ ಹರಿಯುವುದರಿಂದ ಕಾಲುದಾರಿಯಲ್ಲಿನ ಬಂಡೆಗಳು ಪಾಚಿಯಿಂದ ಕೂಡಿದ್ದು, ಇವುಗಳ ಮೇಲೆ ನಡೆದುಕೊಂಡು ಹೋಗುವಾಗ ಜನರು ಜಾರಿ ಬೀಳುವುದು ಸಹಜವಾಗಿತ್ತು. ಇದನ್ನು ತಡೆಯಲು ಸ್ಥಳೀಯ ಅಧಿಕಾರಿಗಳು ಕಾಲುದಾರಿಯ ಅಲ್ಲಲ್ಲಿ ಸಾವಿರಾರು ಮರಳಿನ ಮೂಟೆಗಳನ್ನು ಹಾಕಿದ್ದಾರೆ. ಜನಹಿತ ದೃಷ್ಟಿಯಿಂದ ಅಧಿಕಾರಿಗಳ ಈ ಕಾರ್ಯ ಮೆಚ್ಚುವಂತಾದರೂ ಪರಿಸರದ ದೃಷ್ಟಿಯಿಂದ ಇದು ಮಾರಕ. ಇಲ್ಲಿ ಹಾಕಿರುವ ಪ್ಲಾಸ್ಟಿಕ್ ಚೀಲಗಳು ತುಂಗೆಯ ಒಡಲನ್ನು ಸೇರುತ್ತಿವೆ. ಪ್ಲಾಸ್ಟಿಕ್ ಚೀಲಗಳು ಜಲಚರಗಳಿಗೆ ಮಾರಕವಾಗುತ್ತದೆ. ಜೊತೆಗೆ ಪ್ಲಾಸ್ಟಿಕ್ ಚೀಲಗಳಲ್ಲಿನ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳು ನೀರನ್ನು ಸೇರಿ ಕಲುಷಿತಗೊಳ್ಳುತ್ತಿದೆ. ಇಲ್ಲಿ ನಡೆಯುವ ಜಾತ್ರೆಗೆಂದು ತಾತ್ಕಾಲಿಕವಾಗಿ ನಿರ್ಮಾಣಗೊಳ್ಳುವ ಅಂಗಡಿಗಳಲ್ಲಿನ ಪ್ಲಾಸ್ಟಿಕ್ ತ್ಯಾಜ್ಯವು ದಡದಲ್ಲಿ ಮೆರೆದರೆ, ಈ ಪ್ಲಾಸ್ಟಿಕ್ ಚೀಲಗಳು ಸ್ವಚ್ಛಂದವಾದ ನದಿಯೊಳಗೆ ಇಳಿದಿವೆ. ಪ್ರಕೃತಿ ಮಾತೆಯನ್ನು ಹೀಗೆಲ್ಲ ಹಿಂಸಿಸುವುದು ಹೀನಕೃತ್ಯವಲ್ಲವೇ?

–ಮೃದುಲಾ ಟಿ. ಎಂ., ಬೆಂಗಳೂರು